ಸರ್ವೆ ಸ್ಕೆಚ್ ದರ ಹೆಚ್ಚಳವಾಗಿರುವುದು

2054(2768); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರೈತರ ಜಮೀನು ಸರ್ವೆ ಸ್ಕೆಚ್ ಮಾಡಲು ಈ ಹಿಂದೆ 600 ರೂ ಪಡೆಯಲಾಗುತ್ತಿದ್ದು. ಅದನ್ನು ಏಕಾಏಕಿ 1500 ರೂ.ಗೆ ಹೆಚ್ಚಿಸಲಾಗಿದೆ ಈ ಹೆಚ್ಚಳಕ್ಕೆ ಸರ್ಕಾರ ಅನುಸರಿಸಿದ ಮಾನದಂಡ ಯಾವುದು;

ಆ) ಏಕಾಏಕಿ ದರ ಏರಿಕೆಯಿಂದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ನಿರ್ಧಾರ ಕೈಗೊಳ್ಳಲು ಕಾರಣಗಳೇನು;

ಇ) ದರ ಹೆಚ್ಚಳದ ನಂತರ ಕಂದಾಯ ಇಲಾಖೆಗೆ ಹೆಚ್ಚುವರಿಯಾಗಿ ಲಭಿಸಿದ ಮೊತ್ತ ಎಷ್ಟು; ಈ ಹಣವನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತಿದೆ;

ಈ) ತಹಸೀಲ್ದಾರ್ ಕಛೇರಿಗಳಲ್ಲಿ ರೈತರು ಹಾಗೂ ಸಾರ್ವಜನಿಕರಿಗೆ ಪಹಣಿ ಪತ್ರ ಪಡೆಯುವುದು ಅತ್ಯಂತ ತೊಂದರೆದಾಯಕವಾಗಿದ್ದು, ಇದನ್ನು ಸರಳೀಕರಣಗೊಳಿಸಲು ಇಲಾಖೆ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು);

ಉ) ವಿದ್ಯಾರ್ಥಿಗಳೂ ಸೇರಿದಂತೆ ನಾಗರೀಕರಿಗೆ ಜಾತಿ ಪ್ರಾಮಾಣ ಪತ್ರ ಪಡೆಯುವುದು ಬಹಳ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು;

ಶ್ರೀ ವಿ. ಶ್ರೀನಿವಾಸ ಪ್ರಸಾದ (ಮಾನ್ಯ ಕಂದಾಯ ಸಚಿವರು)

ಅ) ಸರ್ಕಾರದ ಆದೇಶ ಆರ್ ಡಿ 142 ಭೂದಾಸ 2008 ದಿನಾಂಕ 12/08/2008 ರ ಮೇರೆಗೆ 11ಇ ಪ್ರಕರಣಗಳಿಗೆ ₹ 600/– ಗಳು ಮತ್ತು ತತ್ಕಾಲ್ ಪೋಡಿಗೆ ₹ 500/– ಗಳನ್ನು ನಿಗಧಿಪಡಿಸಲಾಗಿತ್ತು.

ಹೀಗೆ ನಿಗದಿಯಾಗಿದ್ದ ಶುಲ್ಕವು ಹಕ್ಕಿನ ವಿಸ್ತೀರ್ಣ ಗ್ರಾಮೀಣ ಹಾಗೂ ನಗರ ಪ್ರದೇಶಗಳ ವಿಂಗಡಣೆಯನ್ನು ಪರಿಗಣಿಸದೆ ಮಾಡಲಾಗಿತ್ತು.

ಪರವಾನಗಿ ಭೂಮಾಪಕರುಗಳಿಗೆ 1999 ರಲ್ಲಿ ಯೋಜನೆ ಜಾರಿಗೊಳಿಸಿದಾಗ ಸೇವಾ ಶುಲ್ಕ ನಿಗದಿಪಡಿಸಿದ್ದು ಇದುವರೆವಿಗೆ ಪರಿಷ್ಕರಿಸದೆ ಇದ್ದು, ಪರವಾನಗಿ ಭೂಮಾಪಕರುಗಳು ಮೇಲಿಂದ ಮೇಲೆ ಒತ್ತಾಯಿಸಿದಂತೆ. ಈ ಬಗ್ಗೆ ಪರಿಶೀಲಿಸಿದ ಸರ್ಕಾರವು ಪರವಾನಗಿ ಭೂಮಾಪಕರುಗಳಿಗೆ ನೀಡುತ್ತಿರುವ ಶುಲ್ಕವನ್ನು ಮತ್ತು ಅದಕ್ಕೆ ಪೂರಕವಾಗಿ ಸಾರ್ವಜನಿಕರಿಂದ ಸ್ವೀಕರಿಸಲಾಗುತ್ತಿರುವ ಅರ್ಜಿ ಶುಲ್ಕವನ್ನು ಪರಿಷ್ಕರಿಸುವುದು ಅವಶ್ಯಕ ಎಂದು ತೀರ್ಮಾನಿಸಿರುತ್ತದೆ. ಸರಾಸರಿಯಾಗಿ ಒಂದು ಅರ್ಜಿಯ ಬಗ್ಗೆ ಅಳತೆ ಕಾರ್ಯ ನಿರ್ವಹಿಸಲು ತಗಲುವ ವೆಚ್ಚ ಪರಿಗಣಿಸಿ ಶುಲ್ಕವನ್ನು ಪರಿಷ್ಕರಿಸಲಾಗಿದೆ.

ಒಂದು ಅರ್ಜಿಯ ಅಳತೆ ಕೆಲಸ ನಿರ್ವಹಿಸಲು ತಗಲುವ ವೆಚ್ಚ:

ಅಂದಾಜು ವೆಚ್ಚ ವಿವರಣೆ	₹ ಗಳಲ್ಲಿ
ಪರವಾನಗಿ ಭೂಮಾಪಕರು ಅಳತೆ ಕಾರ್ಯ ನಿರ್ವಹಿಸಲು ಒಂದು ಅರ್ಜಿಗೆ ಕನಿಷ್ಟ 4 ಜನರಿಗೆ ನೋಟೀಸ್ ನೀಡಬೇಕಾದಲ್ಲಿ ತಗಲುವ ವೆಚ್ಚ	100=00
ಅಳತೆ ಮಾಡುವಾಗ ಸರಪಳಿ ಎಳೆಯಲು ಬಳಸುವ ಕಾರ್ಮಿಕರಿಗೆ ಒಂದು ದಿನದ ಕನಿಷ್ಟ ಕೂಲಿ	250=00
ನೋಟೀಸ್ ಜಾರಿ ಮಾಡಲು ಮತ್ತು ಅಳತೆಗೆ ಹೋಗಿ ಬರಲು ಕನಿಷ್ಟ ಪ್ರಮಾಣ ವೆಚ್ಚ	150=00 ರಿಂದ 200=00
ಲೇಖನ ಸಾಮಗ್ರಿ ಮೂಲ ದಾಖಲಾತಿಗಳ ಪಡೆಯುವಿಕೆ ಮತ್ತು ತಿದ್ದುಪಡಿ ಕಾರ್ಯಗಳನ್ನು ನಿರ್ವಹಿಸಲು (ಪರವಾನಗಿ ಭೂಮಾಪಕರಿಗೆ)	200=00
11ಇ ನಕ್ಷೆ ಯೋಜನೆ ಮತ್ತು ಪರವಾನಗಿ ಭೂಮಾಪಕರ ಯೋಜನೆ ನಿರ್ವಹಿಸಲು ಮೋಜಿಣಿ ಗಣಕ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ ಈ ವ್ಯವಸ್ಥೆಯಲ್ಲಿ ಗಣಕಯಂತ್ರಗಳ ನಿರ್ವಹಣೆ ಪ್ರಿಂಟರ್ ಹಾಗೂ ಲೇಖನ ಸಾಮಗ್ರಿಗಳ ನಿರ್ವಹಣೆ, ಆಪರೇಟರ್ ಗಳಿಗೆ ವೇತನ ತಂತ್ರಾಂಶದ ಹಾಗೂ ಡಾಟಾ ಕೇಂದ್ರವನ್ನು ನಿರ್ವಹಿಸಲು ಕನಿಷ್ಠ ಪ್ರತಿ ಅರ್ಜಿಗೆ	300=00
ಒಟ್ಟು ವೆಚ್ಚ	**₹ 1500=00**

ಮೇಲ್ಕಂಡಂತಿನ ಮಾನದಂಡಗಳನ್ನು ಆಧರಿಸಿ ಸರ್ಕಾರವು ಆದೇಶ ಸಂಖ್ಯೆ ಕಂಇ 279 ಭೂದಾಸ 2013 ದಿನಾಂಕ 21/10/2013 ರಂದು ನವೆಂಬರ್ 1 2013 ರಿಂದ ಜಾರಿಗೆ ಬರುವಂತೆ ಅರ್ಜಿ ಶುಲ್ಕವನ್ನು ಪರಿಷ್ಕರಿಸಿದೆ.

ಆ) ಬಂದಿದೆ

ರೈತರಿಗೆ ತೊಂದರೆಯಾಗಿರುವುದನ್ನು ಪರಿಶೀಲಿಸಿದ ಸರ್ಕಾರವು ಆದೇಶ ಸಂಖ್ಯೆ ಕಂಇ 10 ಭೂದಾಸ 2014 ಬೆಂಗಳೂರು ದಿನಾಂಕ 17/02/2014 ರಂದು ಶುಲ್ಕವನ್ನು ಮರು ಪರಿಷ್ಕರಿಸಿ ಈ ಹಿಂದೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಕಡಿಮೆ ಗೊಳಿಸಿ ಆದೇಶಿಸಿರುತ್ತದೆ.

ಇ) ದಿನಾಂಕ 01/11/2013 ರಿಂದ ಜಾರಿಗೆ ಬಂದು ವ್ಯವಸ್ಥೆಯಂತೆ ಪರವಾನಗಿ ಭೂಮಾಪಕರುಗಳಿಗೆ ಪ್ರತಿ ಅರ್ಜಿಗೆ ಕನಿಷ್ಟ ₹ 800 ಜೊತೆಗೆ ಹೆಚ್ಚುವರಿಯಾಗಿ ಅಳತೆ ಮಾಡುವ ಪ್ರತಿ ಬ್ಲಾಕಿಗೆ 150 ರಂತೆ ಸೇವಾ ಶುಲ್ಕವನ್ನು ನೀಡಬೇಕಾಗಿರುತ್ತದೆ ರಾಜ್ಯದಲ್ಲಿ ಸರಾಸರಿ ಪ್ರತಿ ಪಹಣಿಯಲ್ಲಿ ಕನಿಷ್ಟ 4 ರಿಂದ 5 ಜನ ಹಕ್ಕುದಾರರಿದ್ದು ಪರವಾನಗಿ ಭೂಮಾಪಕರುಗಳು ಪ್ರತಿ ಅರ್ಜಿ ಬಗ್ಗೆ ಅಳತೆ ಮಾಡುವಾಗ ಅರ್ಜಿದಾರರೊಂದಿಗೆ ಉಳಿದ 3–4 ಹಕ್ಕುದಾರರಿಗೂ ಅಳತೆ ಮಾಡಿ ಬ್ಲಾಕ್ ವಿಂಗಡಿಸಬೇಕಾಗಿರುತ್ತದೆ. ಈ ರೀತಿ ಬ್ಲಾಕ್ ವಿಂಗಡಿಸಿರುವುದರಿಂದ ಪರವಾನಗಿ ಭೂಮಾಪಕರುಗಳಿಗೆ ಪ್ರತಿ ಅರ್ಜಿಗೆ ಕನಿಷ್ಟ ₹ 800/– ಜೊತೆಗೆ 450 ರಿಂದ 600/– ರೂಗಳನ್ನು ಅಂದರೆ ಪ್ರತಿ ಅರ್ಜಿಗೆ ₹ 1250/– ರಿಂದ ₹ 1400/– ರವರೆಗೆ ಪಾವತಿಸಬೇಕಾಗಿರುತ್ತದೆ. ಅಲ್ಲದೆ ಪರವಾನಗಿ ಭೂಮಾಪಕರ ಯೋಜನೆ ಮತ್ತು ಫ್ರೀ ಮ್ಯುಟೇಷನ್ ನಕ್ಷೆ ಯೋಜನೆಯನ್ನು ಇಲಾಖೆಯು ಮೋಜಿಣಿ ಎಂಬ ಅಂತರ್ಜಾಲಾಧಾರಿತ ಗಣಕ ವ್ಯವಸ್ಥೆಯ ಮೂಲಕ ಜಾರಿಗೊಳಿಸಿರುತ್ತದೆ. ಈ ವ್ಯವಸ್ಥೆಯಲ್ಲಿ 800 ನಾಡಕಚೇರಿ ಕೇಂದ್ರಗಳು ಹಾಗೂ 203 ತಾಲ್ಲೂಕುಬ್ಯಾಕ್ ಆಫೀಸ್ ಕೇಂದ್ರಗಳ ಮೂಲಕ ಕಾರ್ಯ ನಿರ್ವಹಿಸಲಾಗುತ್ತಿದ್ದು. ಈ

ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಆಪರೇಟರ್‌ಗಳಿಗೆ ವೇತನ ಗಣಕಯಂತ್ರಗಳ ನಿರ್ವಹಣೆ. ಪ್ರಿಂಟರ್ ಹಾಗೂ ಲೇಖನ ಸಾಮಗ್ರಿಗಳ ನಿರ್ವಹಣೆ ತಂತ್ರಾಂಶದ ಹಾಗೂ ಡಾಟಾ ಕೇಂದ್ರವನ್ನು ನಿರ್ವಹಿಸಲು ತಗಲುವ ವೆಚ್ಚ ಗಳನ್ನು ಭರಿಸಬೇಕಾದುದುರಿಂದ ಸರಾಸರಿ ಒಂದು ಅರ್ಜಿಗೆ ₹ 300/– ತಗಲುತ್ತದೆ.

ಈ ರೀತಿ ಸರ್ಕಾರದ ಆದೇಶದಂತೆ ದಿನಾಂಕ 01/11/2013 ರಿಂದ ಶುಲ್ಕ ಪರಿಷ್ಕರಿಸಲಾದಂತೆ ಸ್ವೀಕೃತವಾದ ಅರ್ಜಿಗಳ ಬಗ್ಗೆ ಪ್ರತಿ ಅರ್ಜಿಯಿಂದ ಸಂಗ್ರಹವಾದ ಶುಲ್ಕಕ್ಕಿಂತ ಕೆಲವು ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ ಸೇವಾ ಶುಲ್ಕ ಪಾವತಿಸಬೇಕಾಗಿರುತ್ತದೆ. ಪರಿಷ್ಕರಿಸಿದ ಆದೇಶದಂತೆ ಸ್ವೀಕರಿಸಲಾಗಿರುವ ಎಲ್ಲಾ ಅರ್ಜಿಗಳ ನಿಖಾಲೆಯಾಗಿರದ ಕಾರಣ ಪರಿಷ್ಕರಿಸಿದ ಆದೇಶದಂತೆ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಹಣವನ್ನು ಹೇಳಲು ಕಷ್ಟ ಸಾಧ್ಯವಾಗಿರುತ್ತದೆ.

ಈ) ಗಣಕೀಕೃತ ಪಹಣಿಗಳನ್ನು ರಾಜ್ಯದ 176 ತಾಲ್ಲೂಕು 1 ಅಪರ ತಾಲ್ಲೂಕು ಮತ್ತು 26 ವಿಶೇಷ ತಹಶೀಲ್ದಾರರ ಕಛೇರಿಗಳ ಕಿಯಾಸ್ಕ್ ಕಂದ್ರಗಳಲ್ಲಿ ವಿತರಿಸಲಾಗುತ್ತಿದೆ ಮುಂದುವರೆದು ಡಿಸೆಂಬರ್ 2012 ರಿಂದ 891 ಅಟಲ್ ಜೀ ಜನಸ್ನೇಹಿ ಕೇಂದ್ರಗಳಲ್ಲಿ ಹೋಬಳಿ ಮಟ್ಟದಲ್ಲಿಯೇ ಪಹಣಿಗಳನ್ನು ವಿತರಿಸಲಾಗುತ್ತಿದೆ.

ಸಾರ್ವಜನಿಕರಿಗೆ ಇನ್ನಷ್ಟು ಅನುಕೂಲವಾಗುವಂತೆ. ಇ–ಆಡಳಿತ ಇಲಾಖೆಯು ಗ್ರಾಮಪಂಚಾಯತಿ ಮಟ್ಟದಲ್ಲಿ ನಾಗರೀಕರ ಸೇವಾ ಕೇಂದ್ರಗಳನ್ನು (citizen service centre) ಪ್ರಾರಂಭಿಸಿದ್ದು. ಈ ಕೇಂದ್ರಗಳ ಮೂಲಕ ಪಹಣಿಗಳನ್ನು ಸಹ ಗ್ರಾಮಪಂಚಾಯಿತಿ ಮಟ್ಟದಲ್ಲಿಯೇ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಉ) ಬಂದಿದೆ.

ನಿವಾರಣಾ ಕ್ರಮಗಳು ಈ ಮುಂದಿನಂತಿರುತ್ತವೆ.

1. ಜಾತಿ ಪ್ರಮಾಣ ಪತ್ರವು ಜೀವಿತಾವಧಿಗೆ ಊರ್ಜಿತವಾಗಿದ್ದು, ಇಲಾಖಾ ಮುಖ್ಯಸ್ಥರು ಮೂಲ ಪ್ರಮಾಣ ಪತ್ರಗಳನ್ನು ಯಾವುದೇ ಕಾರಣಕ್ಕೂ ಪಡೆದುಕೊಳ್ಳಬಾರದೆಂದು ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಅವರಿಂದ ದಿನಾಂಕ: 17.12.2013 ರಂದು ಸುತ್ತೋಲೆ ಹೊರಡಿಸಲಾಗಿರುತ್ತದೆ.

2. ವಿದ್ಯಾರ್ಥಿಗಳಿಗೆ ಅಗತ್ಯವಾದ ಪ್ರಮಾಣ ಪತ್ರಗಳಿಗೆ ಅರ್ಜಿಗಳನ್ನು ಶಾಲೆಗಳಲ್ಲಿಯೇ ಪಡೆದು ಪ್ರಮಾಣ ಪತ್ರವನ್ನೂ ಶಾಲೆಗಳಲ್ಲಿಯೇ ನೀಡಲು ಕಂದಾಯ ಇಲಾಖೆ ಹಾಗೂ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಂದ ಅಧಿಕಾರಿ/ ಸಿಬ್ಬಂದಿಗಳಿಗೆ ನಿರ್ದೇಶನ ನೀಡಲಾಗಿದೆ ಹಾಗೂ ಅದರಂತೆ ಕ್ರಮವಹಿಸಲಾಗುತ್ತಿದೆ.

3. ರಾಜ್ಯದ ನಾಗರೀಕರಿಗೆ ನೀಡಲಾಗುವಂತಹ ಜಾತಿ ದೃಢೀಕರಣ ಪತ್ರಗಳು ಶಾಶ್ವತ ದೃಢೀಕರಣಗಳಾಗಿದಾಗ್ಯೂ ಸಹ ಈ ಮೂಲ ದೃಢೀಕರಣಗಳನ್ನು ವಿವಿಧ ಇಲಾಖೆಗಳಿಗೆ ಹಸ್ತಾಂತರಿಸುವುದರಿಂದ ಪುನಃ ಅರ್ಜಿದಾರರು ಪದೇ ಪದೇ ಹೊಸ ಪ್ರಮಾಣ ಪತ್ರಗಳಿಗೆ ಅರ್ಜಿ ಸಲ್ಲಿಸುವುದನ್ನು ತಪ್ಪಿಸುವ ದೃಷ್ಟಿಯಿಂದ ಈ ದೃಢೀಕರಣ ಪತ್ರಗಳನ್ನು ಲ್ಯಾಮಿನೇಟ್ ಮಾಡಿಸಿ ಸಂಬಂಧಿಸಿದವರೆಲ್ಲರಿಗೂ ವಿತರಿಸಲಾಗುವುದು. ಹಾಗೆಯೇ ನಾಡಕಛೇರಿಗಳಲ್ಲಿ ಓ.ಟಿ.ಸಿ. (ಓವರ್ ದಿ ಕೌಂಟರ್) ಪದ್ದತಿಯನ್ನು ಜಾರಿಗೊಳಿಸಲು ರೂಪುರೇಷೆಗಳನ್ನು ಸಿದ್ದಪಡಿಸಲಾಗಿದೆ. ಇದು ನಾಗರೀಕರ ದತ್ತ ಸಂಚಯದ ಆಧಾರದ ಮೇಲೆ ನಿರ್ಮಿಸಿ ಅದನ್ನು ಬಳಸಿಕೊಂಡು ನಾಗರೀಕರಿಗೆ ತಕ್ಷಣದಲ್ಲಿಯೇ ಸೇವೆಯನ್ನು ಒದಗಿಸುವುದರ

ಮೂಲಕ ದಕ್ಷತೆಯನ್ನು ಹೆಚ್ಚಿಸುವ ಒಂದು ಸಾಧನೆ ಈ ಪ್ರಕ್ರಿಯೆಯಲ್ಲಿ ಎಲ್ಲಾ ಅರ್ಹ ನಾಗರೀಕರಿಗೆ ಪ್ರಮಾಣ ಪತ್ರಗಳನ್ನು ಅವರು ಬಂದು ಕೇಳುವುದಕ್ಕೆ ಮುಂಚೆಯೇ ದತ್ತ ಸಂಚಯದ ಆಧಾರದ ಮೇಲೆ ಸಿದ್ದಪಡಿಸಿ ಅವರು ಬಂದು ಕೇಳಿದಾಕ್ಷಣ ಯಾವುದೇ ವಿಳಂಬವಿಲ್ಲದೆ ತಕ್ಷಣವೇ ಕೌಂಟರ್‌ನಲ್ಲಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ. ದೃಢೀಕರಣಗಳನ್ನು ನೀಡಿದಂತಹ ಡಾಟಾ (ಅಂಕಿ ಅಂಶ) ನಾಡಕಛೇರಿಯಲ್ಲಿ ಲಭ್ಯವಿದ್ದು, ಈ ಅಂಕಿ ಅಂಶದ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಇದೇ ದೃಢೀಕರಣವನ್ನು ಕಛೇರಿಗೆ ಬಂದು ಅರ್ಜಿ ಸಲ್ಲಿಸಿದ ತಕ್ಷಣ ಈ ದೃಢೀಕರಣವನ್ನು ನೀಡಲು ಸಹಾಯವಾಗಲಿದೆ. ಇದರಿಂದ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಪದೇ ಪದೇ ಸರ್ಕಾರಿ ಕಛೇರಿಗಳಿಗೆ ಭೇಟಿ ನೀಡುವುದನ್ನು ಕಡಿಮೆ ಮಾಡಿದಂತಾಗುತ್ತದೆ.

ಜವಳಿ ಪಾರ್ಕ್

2055(2769); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಚಿಕ್ಕಬಳ್ಳಾಪುರದಲ್ಲಿ ಜವಳಿ ಪಾರ್ಕ್ ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ತೀರ್ಮಾನ ಏನು;

ಆ) ಕೃಷಿ ಇಲಾಖೆ ಜಮೀನು ಮರಳಿ ಪಡೆದುಕೊಂಡ ನಂತರ ಜವಳಿ ಪಾರ್ಕ್ ನಿರ್ಮಾಣ ಕಾರ್ಯ ಅಲ್ಲಿಗೇ ಸ್ಥಗಿತಗೊಂಡಿದೆಯೇ;

ಇ) ಅಲ್ಲಿಯೇ ಮರು ನಿರ್ಮಾಣಕ್ಕೆ ಅವಕಾಶ ನೀಡುವ ಸಾಧ್ಯತೆ ಇದೆಯೇ;

ಈ) ಹೇರಳ ಉದ್ಯೋಗಾವಕಾಶ ಕಲ್ಪಿಸಲಿದ್ದ ಜವಳಿ ಪಾರ್ಕ್ ನಿರ್ಮಾಣವಾಗುವುದಿಲ್ಲ ಎಂದಾದರೆ, ಬದಲಿಯಾಗಿ ಉದ್ಯೋಗಾವಕಾಶ ಸೃಷ್ಟಿಸುವ ಇನ್ನಾವ ಅವಕಾಶಗಳು ಜಿಲ್ಲೆಯಲ್ಲಿದೆ;